ಗುತ್ತಿಗೆದಾರರ ಹಣ ಪಾವತಿ ಮಾಡುವುದಕ್ಕಾಗುವುದಿಲ್ಲ. ಎಲ್ಲ ಗುತ್ತಿಗೆದಾರರನ್ನೂ ಗಮನಿಸಬೇಕಾಗುತ್ತದೆ.

ಅಧ್ಯಕ್ಷರು: ಹಾಗೆ ಮಾಡಿ ಎಂದು ನಾನು ಹೇಳಲಿಲ್ಲ. ಅವರೇಕೆ ವಿಷಯವನ್ನು ಪ್ರಸ್ತಾಪ ಮಾಡಿದರೆಂದು ಹೇಳಿದೆ. ನೀವು ಯಾವಾಗಲಾದರೂ ಮಾಡಿಕೊಳ್ಳಿ. ನಾನು ಅಡ್ಡ ಬರುವುದಿಲ್ಲ. ಅದು ನಿಮ್ಮ ಅನುಕೂಲ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಗುತ್ತಿಗೆದಾರರಿಗೆ ಸರ್ಕಾರದಿಂದ ನ್ಯಾಯಯುತವಾಗಿ ಏನು ಹಣ ಪಾವತಿಯಾಗಬೇಕೋ ಅದನ್ನು ಪಾವತಿ ಮಾಡಿಸುವುದಕ್ಕೆ ನಾನು ಪ್ರಯತ್ನಿಸುತ್ತೇನೆ.

ಅಧ್ಯಕ್ಷರು: ನಿಮ್ಮ ಖುಷಿ

ಶ್ರೀ ಜಿ.ಬಿ.ಶಿವಕುಮಾರ್: ಆರ್ಬಿಟ್ರೇಷನ್ ಮೂಲಕವೇನಾದರೂ ಹೋದರೆ, ಸರ್ಕಾರ ಒಂದಕ್ಕೆ ಹತ್ತು ಪಟ್ಟು ಡೆಮರೇಜಸ್ ಬೀಳುತ್ತದೆಂದು ಅವರಿಗೆ ಗೊತ್ತು. ಅವರ ನ್ಯಾಯಯುತ ಬೇಡಿಕೆ ಈಡೇರಿಸಿ ಎಂದು ನಾನು ಕೇಳುತ್ತೇನೆ. ಮಂಡ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅವರು ನನ್ನ ಜೊತೆಯಲ್ಲಿ ಓದುತ್ತಿದ್ದರು.

ಅಧ್ಯಕ್ಷರು: ನೀವೇ ಹೇಳಿದರಲ್ಲ. ನನಗೇನು ಕನಸು ಬಿದ್ದಿತ್ತೆ? ಸರ್ಕಾರ ಮಾಡುವುದೆಲ್ಲವೂ ನ್ಯಾಯವಾಗಿಯೇ? ಹಂತಹಂತವಾಗಿ ಮಾಡುತ್ತಾರೆ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಆರ್ಬಿಟ್ರೇಷನ್‌ಗೆ ಹೋದರೆ ಸರ್ಕಾರಕ್ಕೆ ದೊಡ್ಡ ಹೊಣೆಯಾಗುತ್ತದೆಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಹಾಗಾಗದ ರೀತಿಯಲ್ಲಿ ಮಾಡುತ್ತೇನೆ.

ಅಧ್ಯಕ್ಷರು: ನಿಮ್ಮಲ್ಲಿ ವಿಶ್ವಾಸವಿದೆ, ನೀವು ಮಾಡಿ.

(ಖ) 1996-97ನೇ ಸಾಲಿನ ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಂ ಕುರಿತು.

ಶ್ರೀ ಕಾಗೋಡು ತಿಮ್ಮಪ್ಪ(ಸಾಗರ): ಹಣಕಾಸು ಸಚಿವರಲ್ಲಿ ನನ್ನ ವಿನಂತಿ ಇಷ್ಟೆ, 1996-97ನೇ ಸಾಲಿನಲ್ಲಿ ಸ್ಪೆಷಲ್ ಕಾಂಪೋನೆಂಟ್ ಪ್ರೋಗ್ರಾಮ್‌ಗೋಸ್ಕರ 8 ಕೋಟಿ 20 ಲಕ್ಷ ರೂಪಾಯಿಗಳನ್ನು ನಮ್ಮ ಪೂಲಿಂಗ್‌ಗೆ ತೆಗೆದುಕೊಳ್ಳಲಾಗಿತ್ತು. ಆದರೆ, ಅಲ್ಲಿ ಕ್ರಿಯಾಯೋಜನೆ ಮಂಜೂರಾಗಿ ಕೆಲಸವಾಗಿದೆ. ತಾವೇ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿ, ಈ ವರ್ಷದ ಮಟ್ಟಿಗೆ ಮಲೆನಾಡು ಬೋರ್ಡಿನವರೆ ಅದನ್ನು ಕೊಟ್ಟು ಬಿಡಿ, ಹಣ ವಾಪಸ್ಸು ಕೊಟ್ಟುಬಿಡೋಣ ಎಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದೆ.

ಆದರೆ, ಇವತ್ತಿನವರೆಗೆ ಮಲೆನಾಡು ಬೋರ್ಡಿಗೆ ಆ 8 ಕೋಟಿ 20 ಲಕ್ಷ ರೂಪಾಯಿಗಳನ್ನು ತಾವು ಬಿಡುಗಡೆ ಮಾಡಿಲ್ಲ. ಅದೇ ರೀತಿಯಾಗಿ, 1997-98 ನೇ ಸಾಲಿನಲ್ಲಿ ನಮಗೆ ಕೊಡಬೇಕಾದ ಹಣದಲ್ಲಿ 5 ಕೋಟಿ 30 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲ. ಮುಖ್ಯಮಂತ್ರಿಗಳನ್ನೇ ಒಂದು ದಿವಸ ಸಭೆಗೆ ಕರೆಸಿ ಚರ್ಚೆ ಮಾಡಿದಾಗ, 13 ಕೋಟಿ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿಕೊಡುತ್ತೇವೆಂದು, "As per the decision of the cabinet, Rs.5.30 crores shortfall in the amount released during 1997-98, Finance Department to take action in this regard at the time of preparing suppplementary estimates" ಅಂತ ಹೇಳಿ ಮುಖ್ಯಮಂತ್ರಿಗಳೇ ಒಪ್ಪಿ ಕೊಟ್ಟಿರುವ ಮಿನಿಟ್ ಇದು. ಅದನ್ನು ಇದುವರೆಗೆ ಮಾಡಿಲ್ಲ. ಎರಡನೆಯದಾಗಿ 1998-99ನೇ ಸಾಲಿನಲ್ಲಿ ಮಲೆನಾಡು ಅಭಿವೃದ್ಧಿ ಮಂಡಲಿಗೆ ಬಡ್ಜೆಟ್‌ನಲ್ಲಿ 25 ಕೋಟಿ ರೂಪಾಯಿಗಳನ್ನು ತಾವು ನಿಗದಿಪಡಿಸಿದ್ದೀರಿ. ಆದರೆ, ನಮಗೆ ಬಿಡುಗಡೆಯಾದ ಹಣ ಕೇವಲ 18 ಕೋಟಿ 75 ಲಕ್ಷ ರೂಪಾಯಿಗಳು! ಅದರಲ್ಲಿಯೂ ಇನ್ನೂ 7 ಕೋಟಿ ರೂಪಾಯಿ ಬಿಡುಗಡೆ ಆಗಿಲ್ಲ. ಬಾಕಿ ಉಳಿಸಿಕೊಂಡಿರುವ ಒಟ್ಟು 20 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಕೇಳುತ್ತೇನೆ. ಅನ್ಯಾಯ ಮಾಡಬಾರದು, ಬೇಕಾದರೆ ಮುಖ್ಯಮಂತ್ರಿಗಳ ರುಜು ಇರುವ ಪ್ರತಿ ಇದೆ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ತಿಮ್ಮಪ್ಪನವರು ಮಾರ್ಚ್‌ನಲ್ಲೇ ಈ ವಿಷಯ ಪ್ರಸ್ತಾಪಿಸಿದ್ದರು ಮತ್ತು ನಾನು ಆಗಲೇ ಉತ್ತರವನ್ನೂ ಕೊಟ್ಟಿದ್ದೆ. ಮತ್ತೆ ಇದನ್ನು ಪ್ರಸ್ತಾಪಿಸಿದ್ದಾರೆ. 1996-97 ನೇ ಸಾಲಿನಲ್ಲಿ 13 ಕೋಟಿ ರೂಪಾಯಿ ಮುಂತಾದ ಬಗ್ಗೆ ಹೇಳಿದರು. ಅದನ್ನು ಎಸ್‌ಸಿಪಿ ಮತ್ತು ಪಿಎಸ್‌ಪಿಯಲ್ಲಿ ಪೂಲ್ ಮಾಡಿದ್ದೇವೆ. ಹಾಗಾಗಿ ಅದನ್ನು ತೆಗೆದುಕೊಂಡಿದ್ದೇವೇ. ನೀವೆಲ್ಲಾ ಈ ತರಹ ಹೇಳಿದ್ದೀರಿ. ಅದನ್ನೆಲ್ಲಾ ಖರ್ಚು ಮಾಡಬೇಕೆಂದೇನಿಲ್ಲ, ಈ ಮೂರೂ ಕಾರ್ಯಕ್ರಮಗಳಲ್ಲಿ ಖರ್ಚು ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ: 1995-96ನೇ ಸಾಲಿಗೆ ಕ್ಯಾಬಿನೆಟ್‌ನಲ್ಲಿ ನೀವು ಎಗ್ಜೆಂಪ್‌ಷನ್ ಕೊಟ್ಟಿದ್ದೀರಿ. ಕೆಲಸ ಆಗಿದ್ದರಿಂದ, ನೀವು ಅವರ ಹಣ ವಾಪಸ್ ಕೊಡಿ.

ಶ್ರೀ ಸಿದ್ದರಾಮಯ್ಯ: ಅದನ್ನು ತರಿಸಿ ನೋಡುತ್ತೇನೆ. ಎಸ್‌ಸಿಪಿ, ಪಿಎಸ್‌ಪಿಗೆ ಕೊಟ್ಟು, ಉಳಿದಿದ್ದರೆ ಕೊಡುತ್ತೇನೆ. ಪ್ಲಾನ್ ಕೂಡ ಕಟ್ ಮಾಡಿದ್ದಾರೆ. ಅದರಲ್ಲೂ ಸ್ವಲ್ಪ ಹೋಗುತ್ತಿರುತ್ತದೆ.